International Journal of Kannada Research
www.kannadajournal.com

**ISSN: 2454–5813**
IJKR 2019; 5(1): 211-212
© 2019 IJKR
www.kannadajournal.com
Received: 15-11-2018
Accepted: 18-12-2018

**ಡಾ. ಗುರುಸಿದ್ಧಯ್ಯಾ ಸ್ವಾಮಿ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸಿ.ಬಿ.ಖೇಡಗಿ ಮಹಾವಿದ್ಯಾಲಯ, ಅಕ್ಕಲಕೋಟ ಸೊಲ್ಲಾಪುರ ಜಿಲ್ಲೆ, ಮಹಾರಾಷ

**Correspondence**
**ಡಾ. ಗುರುಸಿದ್ಧಯ್ಯಾ ಸ್ವಾಮಿ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸಿ.ಬಿ.ಖೇಡಗಿ ಮಹಾವಿದ್ಯಾಲಯ, ಅಕ್ಕಲಕೋಟ ಸೊಲ್ಲಾಪುರ ಜಿಲ್ಲೆ, ಮಹಾರಾಷ

# ಯುಗಪ್ರವರ್ತಕ ಬಸವಣ್ಣ

**ಡಾ. ಗುರುಸಿದ್ಧಯ್ಯಾ ಸ್ವಾಮಿ**

೧೨ ನೆಯ ಶತಮಾನದಲ್ಲಿ ಆಗಿಹೋದ ಬಸವಣ್ಣ ವಿಶೇಷ ಕ್ರಾಂತಿಯನ್ನು ಮಾಡುವ ಮೂಲಕ ‘ಯುಗ ಪ್ರವರ್ತಕ’ ಎಂಬ ಕೀರ್ತಿಗೆ ಭಾಜನನಾಗಿದ್ದಾನೆ. ಆದರೆ ಇಂದಿನ ವಿಜ್ಞಾನಯುಗದಲ್ಲಿಯೂ ಕೂಡ ಹಲವರ ದೃಷ್ಟಿಯಲ್ಲಿ ಬಸವಣ್ಣ ಲಿಂಗಾಯತ ಧರ್ಮ ಸ್ಥಾಪಕ ಅಥವಾ ಉದ್ಧಾರಕನೇ ಆಗಿದ್ದಾನೆ. ಲಿಂಗಾಯತ ಧರ್ಮದ ಚೌಕಟ್ಟನ್ನು ಸ್ವಲ್ಪ ಬದಿಗಿಟ್ಟ ನಂತರವೂ ಬಸವಣ್ಣನ ಸಾಧನೆಗಳನ್ನು ವಿವಿಧ ನೆಲೆಗಳಲ್ಲಿ ಗುರುತಿಸಲು ಸಾಧ್ಯವಿದೆ. ಇದು ಇಂದಿನ ಅಗತ್ಯವೂ ಹೌದು.

ವೃತ್ತಿಯಿಂದ ಬಸವಣ್ಣ ಬಿಜ್ಜಳನ ರಾಜಭಾಂಡಾರಿಯಾಗಿದ್ದ. ಆತನಿಗೆ ಹಣ, ರೂಪ, ಯೌವನ ಮುಂತಾದ ಯಾವ ಸಂಗತಿಗಳ ಕೊರತೆಯೂ ಇರಲಿಲ್ಲ. ಮನಸ್ಸು ಮಾಡಿದ್ದರೆ ಆತ ಸಾಕಷ್ಟು ಹಣ ಸಂಪಾದಿಸಿ ಐಷಾರಾಮದಿಂದ ಕಾಲ ಕಳೆಯಬಹುದಾಗಿತ್ತು. ಆದರೆ ಬಸವಣ್ಣ ಹಾಗೆ ಮಾಡಲಿಲ್ಲ. ತನ್ನ ಸುತ್ತಲಿನ ಸಮಾಜದಲ್ಲಿ ವಿವಿಧ ರೀತಿಯಲ್ಲಿ ತುಳಿತಕ್ಕೊಳಗಾದ ಜನರನ್ನು ಕಂಡು ಮರುಗುತ್ತಾನೆ. ಅದೇ ವೇಳೆಯಲ್ಲಿ ಪ್ರಜೆಗಳಿಂದ ಹಿಡಿದು ಪ್ರಭುಗಳವರೆಗೆ ಅಸಂಖ್ಯ ಜನ ತಮ್ಮ ಪಾಡಿಗೆ ತಾವಿದ್ದಂತೆ “ಅಯ್ಯೋ ಪಾಪ!” ಎಂದು ಸುಮ್ಮನಾಗಿ ಬಿಡಲಿಲ್ಲ. ಅಂದಿನ ವರೆಗಿನ ಧರ್ಮ ಶಾಸ್ತ್ರಗಳ ಅಧ್ಯಯನ ಆತ ಮಾಡಿದ್ದ. ಆತನ ಓದು ಉಳಿದ ಸಾಮಾನ್ಯರಂಥ ಗಿಳಿಪಾಠದ ಓದು ಆಗಿರಲಿಲ್ಲ. ಆ ಎಲ್ಲ ಕೃತಿಗಳಲ್ಲಿ ಶೋಷಣೆ ಮಾಡುವವರ ಪರ ಇದ್ದ ವಿಧಾನಗಳ ಬಗ್ಗೆ ಆತನಿಗೆ ಸಿಟ್ಟು ಬಂತು. ತುಳಿತಕ್ಕೊಳಗಾದವರನ್ನೆಲ್ಲ ಬಡಿದೆಬ್ಬಿಸಲು ಉಪಾಯವೊಂದನ್ನು ಹುಡುಕಿದ. ಅವರಲ್ಲಿ ಜಾಗೃತಿ ಮೂಡಿಸಲು ಪ್ರತಿದಿನ ಚರ್ಚಾಕೂಟಗಳನ್ನು ಆರಂಭಿಸಿದ. ಬುದ್ಧಿಜೀವಿಯೊಬ್ಬ ಸ್ವ ಪ್ರೇರಣೆಯಿಂದ ಸಮಾಜಪರ ಚಿಂತಕನಾಗಿ ತುಳಿತಕ್ಕೊಳಗಾದವರನ್ನು ಬಡಿದೆಬ್ಬಿಸಲು ಮುಂದಾದದ್ದು ಬಹುಶಃ ಜಗತ್ತಿನ ಇತಿಹಾಸದಲ್ಲಿಯ ಪ್ರಪ್ರಥಮ ಉದಾಹರಣೆಯಾಗಿದೆ.

ಬಸವಣ್ಣ ಪ್ರತಿದಿನ ಕಾಯಕ ಮುಗಿದ ನಂತರ ಸಂಜೆಯ ಬಿಡುವಿನ ವೇಳೆಯಲ್ಲಿ ತನ್ನ ಸಮವಿಚಾರಿಗಳೊಂದಿಗೆ ವಿವಿಧ ವಿಷಯಗಳ ಕುರಿತು ಮುಕ್ತವಾಗಿ ಚರ್ಚಿಸುತ್ತಿದ್ದ. ಬಸವಣ್ಣನ ಪ್ರಗತಿಪರ ವಿಚಾರಗಳಿಂದ ಜನರು ಪ್ರಭಾವಿತರಾದರು. ಈ ಸುದ್ದಿ ತಿಳಿದ ಜನ ತಂಡೋಪತಂಡವಾಗಿ ಚರ್ಚೆಯಲ್ಲಿ ಭಾಗವಹಿಸಲು ಕಲ್ಯಾಣಕ್ಕೆ ಬರತೊಡಗಿದರು. ಕರ್ನಾಟಕದಿಂದ ಬಂದ ಜನರ ಲೆಕ್ಕವೇ ಇಲ್ಲ. ನೆರೆಯ ಮಹಾರಾಷ್ಟ್ರ, ಆಂಧ್ರ ಮುಂತಾದ ರಾಜ್ಯಗಳಿಂದಲೂ ಜನರು ಬಂದರು. ಪ್ರಸಾರ ಮಾಧ್ಯಮಗಳೇ ಇಲ್ಲದ ಅಂದಿನ ಕಾಲದಲ್ಲಿ ಓರಿಸಾ, ಕಾಶ್ಮೀರ ಅಷ್ಟೇ ಅಲ್ಲ, ಅಫಘಾಣಿಸ್ತಾನದಿಂದಲೂ ಜನರು ಬಂದಿದ್ದರೆಂದರೆ ಬಸವಣ್ಣನ ವಿಚಾರಗಳು ಅಂದು ಎಷ್ಟೊಂದು ಪ್ರಭಾವ ಬೀರಿದ್ದವು ಎಂಬುದನ್ನು ಊಹಿಸಬಹುದು.

ಬಸವಣ್ಣ ಮತ್ತು ಅವನ ಅನುಯಾಯಿಗಳು ಸೇರಿ ಚರ್ಚಿಸುತ್ತಿದ್ದ ವಿಷಯಗಳಲ್ಲಿ ಯಾವುದೇ ರೀತಿಯ ಭೇದಗಳಿರಲಿಲ್ಲ. ಆತ್ಮೋದ್ಧಾರ ಮತ್ತು ಸಮಾಜೋದ್ಧಾರವೇ ಬಸವಣ್ಣನ ಪ್ರಮುಖ ಗುರಿಯಾಗಿತ್ತು. ಆತ ಹುಟ್ಟು ಹಾಕಿದ ‘ಅನುಭವ ಮಂಟಪ’ ಇಂದಿನ ‘ಸರ್ವ ಧರ್ಮ ಸಮ್ಮೇಳನ’ಕ್ಕಿಂತ ಸಂಪೂರ್ಣ ಭಿನ್ನವಾಗಿತ್ತು. ಇಂದಿನ ಇಂಥ ಸಮ್ಮೇಳನಗಳು ಕೆಲಮಟ್ಟಿಗೆ ಒಳ್ಳೆಯ ಉದ್ದೇಶವನ್ನು ಹೊಂದಿದ್ದರೂ ಅವು ಬಹುತೇಕ ಔಪಚಾರಿಕ ಎಂಬುದು ಕಟುಸತ್ಯ. ಬಸವಣ್ಣ ಆರಂಭಿಸಿದ ‘ಅನುಭವ ಮಂಟಪ’ ಒಂದು ಅನೌಪಚಾರಿಕ ವೇದಿಕೆಯಾಗಿತ್ತು. ಅದು ಒಂದರೆಡು ಅಥವಾ ಕೆಲವು ದಿನಗಳ ಕಾರ್ಯಕ್ರಮವಾಗಿರದೆ ಪ್ರತಿನಿತ್ಯ ನಡೆಯುವ ಚಟುವಟಿಕೆಯಾಗಿತ್ತು.

ಆಧುನಿಕ ಜಗತ್ತು ಸಾಕ್ಷರತೆಯ ಡಂಗುರ ಸಾರುತ್ತಿದ್ದರೂ ಹೆಬ್ಬೆರಳಿನ ಸಹಿ ಇನ್ನೂ ಪೂರ್ತಿಯಾಗಿ ಮಾಯವಾಗಿಲ್ಲ. ಇದರ ಮೇಲಿಂದ ೧೨ ನೆಯ ಶತಮಾನದ ಸ್ಥಿತಿ ಹೇಗಿರಬೇಡ? ಮೆಲ್ಜಾತಿಯವರ ಗುತ್ತಿಗೆ ವಿಷಯವಾಗಿದ್ದ ಶಿಕ್ಷಣಗಂಗೆಯನ್ನು ಬಸವಣ್ಣ ಅಲ್ಲಿ ಸೇರಿದವರಿಗೆಲ್ಲ ತಲುಪಿಸಿದ.

ಅಲ್ಪಾವಧಿಯಲ್ಲಿ ಜನ ಅಕ್ಷರಸ್ಥರಾಗಿ ಗ್ರಂಥಗಳನ್ನು ಓದತೊಡಗಿದರು. ಅಷ್ಟೇ ಅಲ್ಲ ಅನುಭವ ಮಂಟಪ ಚರ್ಚೆಯಲ್ಲಿ ಮುಕ್ತವಾಗಿ ಚರ್ಚಿಸಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದುದು ಜಗತ್ತಿನ ಪ್ರಪ್ರಥಮ ಉದಾಹರಣೆಯಾಗಿದೆ.

ಜನರಲ್ಲಿ ಜಾಗೃತಿ ಮೂಡಿದಂತೆಲ್ಲ ಅವರು ಸಂಪ್ರದಾಯದ ವಿರುದ್ಧ ಸಿಡಿದೆದ್ದರು. ಪುರೋಹಿತಶಾಹಿಯನ್ನು ಪ್ರಶ್ನಿಸಿದರು. ಜಿಡ್ಡುಗಟ್ಟಿದ ಸಂಪ್ರದಾಯವನ್ನು ಪ್ರಖರ ವೈಚಾರಿಕತೆಯ ಬೆಂಕಿಯ ಮೇಲಿಟ್ಟು ಕಾಯಿಸಿದರು. ಮೂಢನಂಬಿಕೆಗಳ ಬೇರುಗಳನ್ನೇ ಹಿಡಿದು ಅಲ್ಲಾಡಿಸಿದರು. ಸ್ವರ್ಗ–ನರಕ ಮುಂತಾದವುಗಳನ್ನು ನಿರ್ಭಯವಾಗಿ ನಿರಾಕರಿಸಿ 'ಕಾಯಕವೇ ಕೈಲಾಸ' ಎಂದು ನಂಬಿ ಕಾಯಕಕ್ಕೆ ಮಹತ್ವ ಕೊಟ್ಟರು. ಶರಣರ ಆ ಎಲ್ಲ ಕಾಯಕಗಳು ಶ್ರೇಣಿರಹಿತ ಅಂದರೆ ಸಮಾನವಾಗಿದ್ದವು. ಇದು ವಿಶ್ವದ ಅತಿದೊಡ್ಡ ಮತ್ತು ಪ್ರಪ್ರಥಮ ಸಮಾಜೋಧಾರ್ಮಿಕ ಚಳುವಳಿಯಾಗಿದೆ.

ಬಸವಾದಿ ಶರಣರು ನಡೆದಂತೆ ನುಡಿದರು, ನುಡಿದಂತೆ ನಡೆದರು. ಅದಕ್ಕಾಗಿಯೇ ಅವರ ಮಾತುಗಳು ಜಗತ್ತಿನ ಎಲ್ಲ ಕಾಲದ ಎಲ್ಲ ಜನರಿಗೆ ಮಾದರಿಯಾಗಿವೆ. ೧೨ ನೆಯ ಶತಮಾನಕ್ಕಿಂತ ಮೊದಲು ಕೆಲವೇ ಕೆಲವು ಜನರು ಉಪಯೋಗಿಸಿದ 'ವಚನ' ಎಂಬ ಸಾಹಿತ್ಯ ಪ್ರಕಾರವನ್ನು ಬಸವಾದಿ ಶರಣರು ತಮ್ಮ ಅಭಿವ್ಯಕ್ತಿಗಾಗಿ ಒಂದು ಸಶಕ್ತ ಮಾಧ್ಯಮವನ್ನಾಗಿ ಬಳಸಿದರು. ಅಂದು ಅವರು ಆಡಿದ, ಹಾಡಿದ ಮಾತುಗಳು 'ವಚನ'ಗಳಾಗಿ ಲಿಖಿತರೂಪದಲ್ಲಿ ಇಂದಿಗೂ ಉಳಿದು ಬಂದಿವೆ. ಅಂದಿನವರೆಗೆ ದೇವಭಾಷೆ ಎನಿಸಿದ ಪಂಡಿತರ ಸಂಸ್ಕೃತ ಭಾಷೆಯನ್ನು ಧಿಕ್ಕರಿಸಿ ಜನವಾಣಿಯಾದ ಕನ್ನಡದಲ್ಲಿ ವಚನಗಳನ್ನು ಬರೆದು ಜನವಾಣಿಯನ್ನೇ ದೇವವಾಣಿಯ ಎತ್ತರಕ್ಕೆ ಏರಿಸಿದರು. ಈ ವಚನಗಳು ಇಂದಿನ ವಿಜ್ಞಾನ ಯುಗದ ವಿಶ್ವಸಾಹಿತ್ಯಕ್ಕೆ ಕನ್ನಡದ ಅಮೂಲ್ಯ ಕೊಡುಗೆಗಳಾಗಿವೆ.

ಬಸವಣ್ಣ ಮಾಡಿದ ಇನ್ನೊಂದು ವಿಶೇಷ ಉಪಕ್ರಮವೆಂದರೆ ಅಂತರ್ಜಾತಿ ವಿವಾಹ. ಇಂದಿನ ವಿಜ್ಞಾನಯುಗದಲ್ಲಿಯೂ ಈ ವಿಷಯಕ್ಕೆ ಸಮಾಜ ಮನ್ನಣೆ ಇಂದಿಗೂ ಸಂಪೂರ್ಣವಾಗಿ ದೊರೆತಿಲ್ಲ. ಆದ್ದರಿಂದ ಬಸವಣ್ಣನ ಧೈರ್ಯ ಮೆಚ್ಚಲೇಬೇಕು. ಆದರೆ ಇದೇ ಘಟನೆ ಕಲ್ಯಾಣ ವಿಪ್ಲವಕ್ಕೆ ಕಾರಣವಾಯಿತು. ಅಂದು ಕಾಲ ಪಕ್ವವಾಗಿರಲಿಲ್ಲ. ಇಂದು ಕೂಡ ಕಾಲ ಪೂರ್ತಿಯಾಗಿ ಪಕ್ವವಾಗಿಲ್ಲ, ಆದರೆ ಸ್ವಲ್ಪ ಸುಧಾರಿಸಿದೆ ಎನ್ನಬಹುದು. ಈ ಸುಧಾರಣೆ ಬಸವಣ್ಣ ಅಂದು ಬಿತ್ತಿದ ಪ್ರಗತಿಪರ ವಿಚಾರಗಳ ಫಲವೇ ಆಗಿದೆ. ಮುಂಬರುವ ನವಸಮಾಜ ನಿರ್ಮಿತಿಗೆ ಭದ್ರಬುನಾದಿ ಹಾಕಿದವನು ಬಸವಣ್ಣ ಎಂಬ ಮಾತು ಎಲ್ಲರೂ ಒಪ್ಪಲೇಬೇಕು.

ಬಸವಣ್ಣ ತನ್ನ ವೃತ್ತಿ ಜೀವನದಲ್ಲಿ ಹಗರಣಗಳಿಗೆ ಕೈ ಹಾಕಿ ದುಡ್ಡು ಸಂಪಾದಿಸಲು ಎಂದೂ ಬಯಸಲಿಲ್ಲ. ಕಲ್ಯಾಣ ಕ್ರಾಂತಿಯ ಸಮಯದಲ್ಲಿ ರಾಜನಿಗೂ ಅಂಜದೆ ತನ್ನ ತತ್ವಗಳಿಗೆ ಬದ್ಧನಾಗಿ ಮಂತ್ರಿ ಪದವಿಯನ್ನೇ ತ್ಯಜಿಸಿದ ಧೀರ ವ್ಯಕ್ತಿ. ಉನ್ನತ ಹುದ್ದೆಯಲ್ಲಿದ್ದರೂ ಸದಾ ಮುಗಿದ ಕೈ ಬಾಗಿದ ತಲೆಯ ಸಜ್ಜನಿಕೆಯ ಸಾಕಾರ ಮೂರ್ತಿ. ದೇಹದಲ್ಲಿ ಉಸಿರಿರುವತನಕ ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಬಸವಣ್ಣ ಕೇವಲ ರಾಜಕಾರಣಿಗಳಿಗಷ್ಟೇ ಅಲ್ಲ, ಜಗತ್ತಿನ ಪ್ರತಿಯೊಬ್ಬರಿಗೂ ಮಾದರಿಯಾಗಿದ್ದಾನೆ.

**ಬಸವಣ್ಣನ ಸಾಧನೆಗಳಲ್ಲಿಯ ಕೆಲವು ವಿಶೇಷತೆಗಳನ್ನು ಜಾಗತಿಕ ಮಟ್ಟದ ದಾಖಲೆಗಳೆಂದು ಪರಿಗಣಿಸಬಹುದಾಗಿದೆ. ಉದಾ.**

- ಉನ್ನತ ಹುದ್ದೆಯಲ್ಲಿದ್ದರೂ ಐಷಾರಾಮಿ ಜೀವನ ನಡೆಸದೆ ಸರಳ ಜೀವನ ನಡೆಸಿದ ಪ್ರಥಮ ವ್ಯಕ್ತಿ.
- ಸಮಾಜಪರ ಚಿಂತನೆ ಮಾಡಿದ ಬಹುಶಃ ಪ್ರಥಮ ಬುದ್ಧಿಜೀವಿ.
- ತುಳಿತಕ್ಕೊಳಗಾದವರನ್ನು ಒಂದುಗೂಡಿಸಿ ಅವರಲ್ಲಿ ಜಾಗೃತಿ ಮೂಡಿಸಲು ಪ್ರಥಮ ಸಂಘಟಕ.
- ಪ್ರಪ್ರಥಮ ಪ್ರಗತಿಪರ ವಿಚಾರವಾದಿ.
- ಪ್ರಸಾರ ಮಾಧ್ಯಮಗಳೇ ಇಲ್ಲದ ಕಾಲದಲ್ಲಿಯೂ ಮತ್ತು ಇಂದು ಕೂಡ ಅತಿ ಹೆಚ್ಚು ಪ್ರಭಾವ ಬೀರಿದ ವ್ಯಕ್ತಿ.
- ಮುಕ್ತ ಚರ್ಚೆಗಾಗಿ ವೇದಿಕೆ ಸ್ಥಾಪಿಸಿದ ಪ್ರಥಮ ಸಂಘಟಕ.
- ಲಿಂಗ, ಜಾತಿ, ವರ್ಣ ಮುಂತಾದ ಭೇದಗಳನ್ನು ಹೊಡೆದು ಹಾಕಿ ಎಲ್ಲರನ್ನು ಒಂದುಗೂಡಿಸಿದ ಪ್ರಥಮ ಸಂಘಟಕ.
- ೧೨ ನೆಯ ಶತಮಾನದಲ್ಲಿಯೇ ಸರ್ವರಿಗಾಗಿ ಶಿಕ್ಷಣ ಕೊಡಲು ಸಾಕ್ಷರತೆಯ ಪತಾಕೆ ಹಾರಿಸಿದ ಪ್ರಥಮ ವ್ಯಕ್ತಿ.
- ಎಲ್ಲ ವರ್ಗದ ಜನರು ತಮ್ಮ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಮಂಡಿಸಿದ ಪ್ರಥಮ ಘಟನೆ.
- ಜಿಡ್ಡುಗಟ್ಟಿದ ಸಂಪ್ರದಾಯ ಮತ್ತು ಮೂಢನಂಬಿಕೆಗಳ ವಿರುದ್ಧ ಆರಂಭಿಸಿದ ಪ್ರಥಮ ಹೋರಾಟ. ಹೋರಾಟದ ನೇತಾರ ಬಸವಣ್ಣ.
- ಪ್ರಪ್ರಥಮ ಶ್ರೇಣಿರಹಿತ ಕಾಯಕ ವ್ಯವಸ್ಥೆ.
- ಪ್ರಪ್ರಥಮ ಮತ್ತು ಬೃಹತ್ ಸಮಾಜೋಧಾರ್ಮಿಕ ಚಳುವಳಿ.
- ನೆಯ ಶತಮಾನಕ್ಕಿಂತ ಮೊದಲು ಅಲ್ಪ ಪ್ರಮಾಣದಲ್ಲಿ ಬಳಸಲ್ಪಡುತ್ತಿದ್ದ 'ವಚನ' ಸಾಹಿತ್ಯ ಪ್ರಕಾರವನ್ನು ಅಭಿವ್ಯಕ್ತಿ ಮಾಧ್ಯಮವಾಗಿ ಸಾಮೂಹಿಕ ಮತ್ತು ಪ್ರಭಾವಿ ಬಳಕೆ ಪ್ರಪ್ರಥಮವಾಗಿ ಆಯಿತು.
- ಪ್ರಪ್ರಥಮವಾಗಿ ಎಲ್ಲ ವರ್ಗದ ಜನರಿಂದ ಸಾಮೂಹಿಕವಾಗಿ ವಿಪುಲ ಸಾಹಿತ್ಯ ರಚನೆ.
- ಪ್ರಪ್ರಥಮವಾಗಿ ಪಂಡಿತರ ಭಾಷೆಯನ್ನು ನಿರಾಕರಿಸಿ ಜನವಾಣಿಯನ್ನು ಸಾಮೂಹಿಕವಾಗಿ ಬಳಸಿ ಸಾಹಿತ್ಯ ರಚನೆ.
- ಅಂತರ್ಜಾತಿ ವಿವಾಹ ಏರ್ಪಡಿಸಿದ ಬಹುಶಃ ಪ್ರಥಮ ವ್ಯಕ್ತಿ.
- ಎಂಥ ವೇಳೆಯಲ್ಲಿಯೂ ತತ್ವಗಳಿಂದ ವಿಚಲಿತನಾಗದೆ, ತತ್ವಸಿದ್ಧಾಂತಗಳಿಗಾಗಿ ಮಂತ್ರಿಪದವಿಯನ್ನೇ ತ್ಯಜಿಸಿದ ಬಹುಶಃ ಪ್ರಥಮ ವ್ಯಕ್ತಿ.

ಈ ಪಟ್ಟಿ ಇನ್ನೂ ಬೆಳೆಯಬಹುದು. ನಡೆದಂತೆ ನುಡಿದ, ನುಡಿದಂತೆ ನಡೆದ ಬಸವಣ್ಣ ಸರ್ವಕಾಲಕ್ಕೂ ಸರ್ವರಿಗೂ ಮಾದರಿಯಾಗಿ ನಿಲ್ಲುತ್ತಾನೆ. ಸಮಸ್ತ ಮನುಕುಲದ ಸರ್ವತೋಮುಖ ಏಳ್ಗೆಗಾಗಿ ಶ್ರಮಿಸಿದ ಬಸವಣ್ಣ ಮಹಾಮಾನವತಾವಾದಿಯಾಗಿದ್ದಾನೆ. ಅದಕ್ಕಾಗಿ ಆತನಿಗೆ ವಿಶ್ವಗುರು, ಮಹಾತ್ಮ ಮುಂತಾದ ಬಿರುದುಗಳನ್ನು ಜನರೇ ನೀಡಿ ಗೌರವಿಸಿದ್ದಾರೆ. ಜಗತ್ತಿನ ಸಂಪೂರ್ಣ ಇತಿಹಾಸದಲ್ಲಿ ಬಸವಣ್ಣನಂತೆ ಯುಗಪ್ರವಾಹದ ದಿಕ್ಕನ್ನೇ ಬದಲಿಸಿದ ಬೇರೆ ಉದಾಹರಣೆಗಳು ಸಿಗುವುದಿಲ್ಲ. ಅದಕ್ಕಾಗಿಯೇ ಬಸವಣ್ಣ 'ಯುಗಪ್ರವರ್ತಕ'ನೆನಿಸಿದ್ದಾನೆ.